ಭಾರತ್ ಎಲೆಕ್ಟ್ರಾನಿಕ್ಸ್
भारत इलेक्ट्रॉनिक्स
BHARAT ELECTRONICS
Quality, Technology, Innovation

ಭಾರತ್ ಎಲೆಕ್ಟ್ರಾನಿಕ್ಸ್
ಜ್ಞಾನಾರ್ಜನೆ ಮತ್ತು ವಿಕಾಸ ಕೇಂದ್ರ
ಮಾನವ ಸಂಪನ್ಮೂಲಗಳ ಇಲಾಖೆ
ಜಾಲಹಳ್ಳಿ, ಬೆಂಗಳೂರು - 560013

# ಶಿಷ್ಯವೃತ್ತಿ ತರಬೇತಿಗಾಗಿ ಅಲ್ಪಾವಧಿ ಶಿಕ್ಷಣಾರ್ಥಿಗಳ ಆಯ್ಕೆ

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಭಾರತ ಸರ್ಕಾರ , ರಕ್ಷಣಾ ಮಂತ್ರಾಲಯದ ಒಂದು ಸಾರ್ವಜನಿಕ ಉದ್ಯಮ) ಬಹು ಉತ್ಪನ್ನ ಹಾಗೂ ನವರತ್ನ ಕಂಪನಿ. ಇದು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಯಾಗಿದ್ದು ಭಾರತಾದ್ಯಂತ 9 ಉತ್ಪಾದನಾ ಘಟಕಗಳನ್ನು ಹೊಂದಿದೆ. ಬಿಇಎಲ್ 2017-18 ನೇ ಹಣಕಾಸಿನ ವರ್ಷದಲ್ಲಿ ರೂ.10,080 ಕೋಟಿಗಳ ವಹಿವಾಟಿನ ದಾಖಲೆಯನ್ನುಸಾಧಿಸಿದೆ.

ಈ ಕೆಳಗೆ ತಿಳಿಸಲಾದ ವಿವಿಧ ಕೇಂದ್ರಗಳಲ್ಲಿ ಅಪ್ರೆಂಟಿಸ್ ಕಾಯ್ದೆ 1961 ರ ಅಧೀನ ಶಿಷ್ಯವೃತ್ತಿ ತರಬೇತಿಗಾಗಿ ಅಲ್ಪಾವಧಿ ಶಿಕ್ಷಣಾರ್ಥಿಗಳ (ಎಸ್ ಟಿ ಎ) ಆಯ್ಕೆಯನ್ನು ಹಮ್ಮಿಕೊಳ್ಳಲಾಗಿದೆ.

| ಕ್ರ.ಸಂ. | ಕೇಂದ್ರ | ದಿನಾಂಕ | ವೃತ್ತಿ | ಸಮಯ |
|---|---|---|---|---|
| 1. | ಸರ್ಕಾರಿ ಐ ಟಿ ಐ ಭದ್ರಾವತಿ / ಸರ್ಕಾರಿ ಐ ಟಿ ಐ ಹುಬ್ಬಳ್ಳಿ | 25-May-2018 | ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್, ಫಿಟ್ಟರ್ | ಬೆಳಿಗ್ಗೆ 10:00ಗಂಟೆಗೆ |
| | | 26-May-2018 | ಎಲೆಕ್ಟ್ರಿಷಿಯನ್, ಟರ್ನರ್, ಮೆಷಿನಿಸ್ಟ್, ವೆಲ್ಡರ್, ಎಲೆಕ್ಟ್ರೋಪ್ಲೇಟರ್, ಆರ್ ಮತ್ತು ಎ.ಸಿ, ಡಿ.ಎಂ.ಎಂ. ಮತ್ತು ಪಾಸ/ಕೋಪ | |
| 2 | ಸರ್ಕಾರಿ ಐ ಟಿ ಐ ಗುಲಬರ್ಗ / ಸರ್ಕಾರಿ ಐ ಟಿ ಐ ಮಂಗಳೂರು | 28-May-2018 | ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್, ಫಿಟ್ಟರ್ | |
| | | 29-May-2018 | ಎಲೆಕ್ಟ್ರಿಷಿಯನ್, ಟರ್ನರ್, ಮೆಷಿನಿಸ್ಟ್, ವೆಲ್ಡರ್, ಎಲೆಕ್ಟ್ರೋಪ್ಲೇಟರ್, ಆರ್ ಮತ್ತು ಎ.ಸಿ, ಡಿ.ಎಂ.ಎಂ. ಮತ್ತು ಪಾಸ/ಕೋಪ | |
| 3 | ಸರ್ಕಾರಿ ಐ ಟಿ ಐ ಮೈಸೂರು | 30-May-2018 | ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್, ಫಿಟ್ಟರ್ | |
| | | 31-May-2018 | ಎಲೆಕ್ಟ್ರಿಷಿಯನ್, ಟರ್ನರ್, ಮೆಷಿನಿಸ್ಟ್, ವೆಲ್ಡರ್, ಎಲೆಕ್ಟ್ರೋಪ್ಲೇಟರ್, ಆರ್ ಮತ್ತು ಎ.ಸಿ, ಡಿ.ಎಂ.ಎಂ. ಮತ್ತು ಪಾಸ/ಕೋಪ | |

ಆಯ್ಕೆಗೆ ಬೇಕಾದ ಅರ್ಹತೆಗಳು :

1. ಅಭ್ಯರ್ಥಿಗಳು ಐ ಟಿ ಐ ನಲ್ಲಿ (NCVT / SCVT) ಮೇಲೆ ಸೂಚಿಸಿರುವ ಯಾವುದೇ ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಅಂತಿಮ ಸೆಮಿಸ್ಟರ್ ನಲ್ಲಿ ವ್ಯಾಸಾಂಗ ಮಾಡುತ್ತಿರಬೇಕು.
2. ದಿನಾಂಕ 01.10.2015 ರಂದು ಅಥವಾ ನಂತರ ಐ ಟಿ ಐ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಅರ್ಹರಿರುತ್ತಾರೆ.
3. ಗರಿಷ್ಟ ವಯೋಮಿತಿ 21 ವರ್ಷ (ಅಕ್ಟೋಬರ್ 15 2018 ರಂತೆ)
4. ಆಯ್ಕೆ ಮಾಡುವ ಕೇಂದ್ರಗಳಲ್ಲಿ ಆಯ್ಕೆ ಪ್ರಕ್ರಿಯೆಯ ಸಮಯದಲ್ಲಿ ಕೆಳಕಂಡ ಮೂಲ ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಪ್ರಸ್ತುತಪಡಿಸತಕ್ಕದ್ದು.
   - ಎಸ್ ಎಸ್ ಎಲ್ ಸಿ ಅಂಕ ಪಟ್ಟಿ (ವಯಸ್ಸಿನ ಪುರಾವೆಯಂತೆ)
   - ಐ ಟಿ ಐ ಮೂಲ ಅಂಕ ಪಟ್ಟಿಗಳು
   - ಅಂತಿಮ ವರ್ಷ/ಸೆಮಿಸ್ಟರ್ ನಲ್ಲಿ ಓದುತ್ತಿರುವವರು ತಮ್ಮ ಗುರುತಿನ ಚೀಟಿ ಅಥವಾ ಕಾಲೇಜ್ ಪ್ರಾಚಾರ್ಯರಿಂದ ವಿತರಿಸಿದ ಪತ್ರವನ್ನು ಪ್ರಸ್ತುತಪಡಿಸತಕ್ಕದ್ದು.
   - ಜಾತಿ ಪ್ರಮಾಣಪತ್ರ (ಪ.ಜಾ./ಪ.ಪಂ./ಇ.ಹಿ.ವ/ಪಿ.ಡಬ್ಲ್ಯೂ.ಡಿ) ಅನ್ವಯಿಸಿದ್ದಲ್ಲಿ

**ಸಾಮಾನ್ಯ ವಿವರಗಳು :**

- ಮೇಲಿನ ಷರತ್ತುಗಳು ಮತ್ತು ನಿಬಂಧನೆಗಳನ್ನು ಪೂರೈಸುವ ಅಭ್ಯರ್ಥಿಗಳು ಮೇಲೆ ತಿಳಿಸಿರುವ ಯಾವುದೇ ಒಂದು ಆಯ್ಕೆಯ ಕೇಂದ್ರಗಳಲ್ಲಿ ಆಯ್ಕೆಗಾಗಿ ಹಾಜರಾಗಬಹುದಾಗಿದೆ.
- ಅಪ್ರೆಂಟಿಸ್ ಶಿಪ್ ತರಬೇತಿ ಅವಧಿಯು ಒಂದು ವರ್ಷ ಆಗಿರುತ್ತದೆ.
- ಸರ್ಕಾರಿ ನಿಯಮಗಳನುಸಾರ ಶಿಷ್ಯವೇತನವನ್ನು ನೀಡಲಾಗುವುದು. (ಶಿಷ್ಯವೇತನದ ಪ್ರಸ್ತುತ ದರವು ರೂ.10,049/- ಆಗಿರುತ್ತದೆ.)
- ಕ್ಯಾಂಟೀನ್, ಸಾರಿಗೆ ಸೌಲಭ್ಯಗಳನ್ನು ಒದಗಿಸಲಾಗುವುದು.
- ವೈದ್ಯಕೀಯ ಸೌಲಭ್ಯಗಳನ್ನು ಕಂಪನಿ ನಿಯಮಗಳನುಸಾರ ಒದಗಿಸಲಾಗುವುದು.
- ಕಂಪನಿ ಮಾನದಂಡದ ಅನುಸಾರ ನಗರದ ಹೊರ ಪ್ರದೇಶದ ಅಭ್ಯರ್ಥಿಗಳಿಗೆ ವಸತಿ ಸೌಲಭ್ಯಗಳನ್ನು ನೀಡಲಾಗುವುದು.
- ಆಯ್ಕೆಗಾಗಿ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಟಿ.ಎ. / ಡಿ.ಎ. ಭತ್ಯೆಯನ್ನು ಪಾವತಿಸಲಾಗುವುದಿಲ್ಲ.

ಸಹಿ/-

ಉಪ ವ್ಯವಸ್ಥಾಪಕರು (ಮಾ.ಸಂ. / ಸಿ. ಎಲ್. ಡಿ)